ಹನುಮೇಗೌಡರು ಶಾಸಕರು, ದಿನಾಂಕ: 23.11.92 ರಂದು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಪತ್ರವನ್ನು ಬರೆದು ಹಾಸನ ಜಿಲ್ಲೆಯ ಶಾಂತಿಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಒಂದು ಹೆರಿಗೆ ವಾರ್ಡನ್ನು ಮಂಜೂರು ಮಾಡಬೇಕೆಂದು ವಿನಂತಿಸಿಕೊಂಡಿರುತ್ತಾರೆ. ಈ ಬಗ್ಗೆ ಸ್ಥಳೀಯರು ಒಂದು ಲಕ್ಷ ರೂಪಾಯಿಗಳ ವಂತಿಗೆ ಹಣವನ್ನು ಕೊಡಲು ಸಿದ್ದರಿರುವರು ಹಾಗೂ ಕಟ್ಟಡದ ವೆಚ್ಚದ ಉಳಿದ ಭಾಗವನ್ನು ಭರಿಸಲು ಜಿಲ್ಲಾ ಪರಿಷತ್ತು ಆಯವ್ಯಯದಲ್ಲಿ ಅವಕಾಶವಿದೆಯೋ ಎಂಬುದನ್ನು ಪರಿಶೀಲಿಸಿ ಜಿಲ್ಲಾ ಪರಿಷತ್ತಿನ ಅನುಮೋದನೆಯೊಂದಿಗೆ ಪ್ರಸ್ತಾವನೆಯನ್ನು ಕಳುಹಿಸಲು ಜಿಲ್ಲಾ ಮಟ್ಟದ ಅಧಿಕಾರಿಗಳ ಜೊತೆ ಪತ್ರ ವ್ಯವಹಾರ ನಡೆದಿದೆ. ಮಾನ್ಯ ಶಾಸಕರು ಕೇಳಿರುವ ಹಾಗೆ ಸ್ಥಳೀಯರಿಂದ ಒಂದು ಲಕ್ಷ ರೂಪಾಯಿಯ ವಂತಿಗೆ ದೊರೆಯುವುದಾದರೆ ಮತ್ತು ಜಿಲ್ಲಾ ಪರಿಷತ್ತಿನಲ್ಲಿ ಕಟ್ಟಡಕ್ಕೆ ಬೇಕಾಗುವ ಅಂದಾಜಿನ ಉಳಿದ ಮೊತ್ತವನ್ನು 1993-94ನೇ ಸಾಲಿನಲ್ಲಿ ಒದಗಿಸಿದ್ದಲ್ಲಿ 10 ಹಾಸಿಗೆಯುಳ್ಳ ಹೆರಿಗೆ ವಾರ್ಡನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು. ಹಾಗೂ ಈ ವಿಭಾಗಕ್ಕೆ ಬೇಕಾಗಿರುವ ಸಿಬ್ಬಂದಿಯನ್ನು ಮತ್ತು ಇತರ ಅಗತ್ಯ ಉಪಕರಣಗಳನ್ನು ಕಟ್ಟಡ ಪೂರ್ಣಗೊಳ್ಳುವ ಸಮಯಕ್ಕೆ ಒದಗಿಸಲಾಗುವುದು.

(3) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜೇನು ಕೃಷಿ

ಶ್ರೀ ಬಿ. ಎಂ. ಇದಿನಬ್ಬ:– ಮಾನ್ಯ ಧ್ಯಕ್ಷರೆ, ರಾಜ್ಯದಲ್ಲಿ ಜೇನುಕೃಷಿಯ ಭವಿಷ್ಯ ಚೆನ್ನಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಕೂಡ ಜೇನು ಕೃಷಿ ವಿಪುಲವಾಗಿದೆ. ಆದರೆ ಈಗ ಜೇನು ಕೃಷಿಗೆ ಅಪಾರ ಹಾನಿಯಾಗಿರುತ್ತದೆ. ಜೇನುನೊಣಗಳ ಮಾರಕ ರೋಗದಿಂದಾಗಿ ನೊಣಗಳು ಸಾಯುತ್ತಿವೆ. ಜೇನುನೊಣಗಳ ರೋಗ ನಿವಾರಣೆ ಜರೂರಿನ ವಿಷಯವಾಗಿರುತ್ತದೆ. ಈ ಕುರಿತು ಸರ್ಕಾರದ ಇಲಾಖೆ ಕಾರ್ಯಕ್ರಮ ತೆಗೆದುಕೊಳ್ಳುವುದು ಅತಿ ಪ್ರಾಮುಖ್ಯ. ಈ ಬಗ್ಗೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆಯೇ ? ಕೇಂದ್ರ ಸರ್ಕಾರದ ಇತರೆ ರಾಜ್ಯಗಳಿಗೆ ಜೇನು ಕೃಷಿಗೆ ಕಿಜ್ಞಾಗಿ ನೆರವು ನೀಡಿರುತ್ತದೆ. ಆ ಪ್ರಕಾರ ಕರ್ನಾಟಕವೂ ಕನಿಷ್ಠ 5 ಕೋಟಿ ರೂಪಾಯಿಗಳ ನೆರವು ಕೇಳುವುದೇ ? ಈ ಕುರಿತು ಸಣ್ಣ ಕೈಗಾರಿಕಾ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಸಿ. ಆರ್. ಸಗೀರ್ ಅಹಮದ್ (ಸಣ್ಣ ಕೈಗಾರಿಕ ಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ರಾಜ್ಯದ ಮಲೆನಾಡು ಜಿಲ್ಲೆಯಲ್ಲಿ ಜೇನು ಕೃಷಿಗೆ ಒಳ್ಳೆಯ ಭವಿಷ್ಯ ಇದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೂಡ ಜೇನು ಕೃಷಿ ಅಭಿವೃದ್ಧಿಗೆ ಸಾಕಷ್ಟು ಅವಕಾಶವಿದೆ. ಆದರೆ 1992ರ ಪ್ರಾರಂಭದಿಂದ ಜೇನು ಕುಟುಂಬ ಸಂಸಾರಕ್ಕೆ ತಾಯ್ ಸ್ಯಾಕ್ ಬ್ರೂಡ್ ಎಂಬ ವೈರಸ್ ಕಾಯಿಲೆ ಪ್ರಾರಂಭವಾಗಿ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೊಡಗು ಜಿಲ್ಲೆಗಳಲ್ಲಿ ಜೇನು ಕುಟುಂಬಕ್ಕೆ ತುಂಬ ಹಾನಿಯಾಗಿದೆ. ಇದರಿಂದ ಜೇನು ಕೃಷಿಯನ್ನು ಅವಲಂಬಿಸಿರುವ ರೈತರಿಗೆ ಅಪಾರ ನಷ್ಟ ಉಂಟಾಗಿದೆ. ಈ ವೈರಸ್ ಕಾಯಿಲೆಗೆ ಔಷಧಿ ಇಲ್ಲದಿರುವುದರಿಂದ ವೈರಸ್ ಕಾಯಿಲೆಯನ್ನು ಗುಣಪಡಿಸಲು ಸಾಧ್ಯವಾಗಿರುವುದಿಲ್ಲ. ಈ ಕಾಯಿಲೆ ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಿಗೂ ಹರಡುತ್ತಿದೆ. ಆದಾಗ್ಯೂ ಈ ಕಾಯಿಲೆ ಹರಡುವಿಕೆಯನ್ನು ನಿಯಂತ್ರಿಸಲು ಮತ್ತು ಕಾಯಿಲೆಯಿಂದ ನಷ್ಟಕ್ಕೆ ಒಳಪಟ್ಟ ಜೇನು ಕೃಷಿಕರಿಗೆ ಪರಿಹಾರ ನೀಡಲು ಸರ್ಕಾರದಿಂದ ಈಗಾಗಲೇ ರೂ. 3.00 ಲಕ್ಷಗಳನ್ನು ಮಂಜೂರು ಮಾಡಲಾಗಿದೆ. ಮತ್ತು 3.00 ಲಕ್ಷ ರೂ.ಗಳನ್ನು ಕೊಡುವುದಕ್ಕೆ ವಿಪ್ಲಾಡು ಮಾಡಲಾಗಿದೆ. ಈ ಕಾಯಿಲೆ ಹರಡುವುದನ್ನು ತಡೆಗಟ್ಟುವುದಕ್ಕೆ ಹಾಗೂ ಜೇನು ಕೃಷಿಯನ್ನು ಪುನರ್ಜೀವನಗೊಳಿಸಲು ರಾಜ್ಯ ಮಟ್ಟದ ಜೇನು ಕುಟುಂಬ ಕಾಯಿಲೆ ನಿಯಂತ್ರಣ ಸಮಿತಿಯನ್ನು ರಚಿಸಲಾಗಿದೆ. ಈ ಕಾಯಿಲೆ ನಿಯಂತ್ರಣ ಕೆಲಸವು ಜರೂರಾಗಿ ನಡೆಯುತ್ತಿದೆ. ಆಫ್ರಿಕನ್ ಮತ್ತು ಇಟಾಲಿಯನ್, ಜೇನು ನೊಣಗಳನ್ನು ಅಂತರಪ್ರದೇಶದಲ್ಲಿ ತಂದು ಸಾಕಿದರೆ ನಮ್ಮ ರಾಜ್ಯದಲ್ಲಿಯೂ ತಂದು ಸಾಕುವ ಬಗ್ಗೆ

ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಆದರೆ ಈ ನೊಣಗಳು ನಮ್ಮ ಪರಿಸರಕ್ಕೆ ಹೊಂದಿಕೊಳ್ಳುವುದೇ ಇಲ್ಲವೇ ಎನ್ನುವುದರ ಬಗ್ಗೆ ಪರಿಶೀಲನೆ ನಡೆಯುತ್ತಿದೆ. ಕೇಂದ್ರ ಸರ್ಕಾರದಿಂದ ಖಾದಿ ಆಯೋಗದ ಮೂಲಕ ಕಾಯಿಲೆ ನಿಯಂತ್ರಣ ಪ್ರಯತ್ನಗಳು ನಡೆಯುತ್ತಿದೆ. ಈ ಬಗ್ಗೆ ಕೇಂದ್ರ ಸರ್ಕಾರದ ನೆರವನ್ನು ಪಡೆಯಲು ಕೋರಲಾಗುವುದು.

(4) ಅರಣ್ಯ ಇಲಾಖೆಯ ಗಾರ್ಡ್‌ಸ್ ಸಿಬ್ಬಂದಿಗಳ ವರ್ಗಾವಣೆ.

ಶ್ರೀಮತಿ ಸುಮಾ ವಸಂತ (ವಿರಾಜಪೇಟೆ):– ಸನ್ಮಾನ್ಯ ಅಧ್ಯಕ್ಷರೆ, ರಾತ್ರಿ –ಹಗಲು ಕೆಲಸ ಮಾಡಿ ಜನರ ಕಷ್ಟವನ್ನು ನೋಡುತ್ತಿರುವ ಅರಣ್ಯ ಸಿಬ್ಬಂದಿ ವರ್ಗದವರಿಗೆ ಸವಲತ್ತು ನೀಡಬೇಕಾದುದು ಅತಿ ಅವಶ್ಯಕವಾಗಿರುತ್ತದೆ. ಅದೇ ವರ್ಗದ ಸಿಬ್ಬಂದಿಯವರಿಗೆ ಬೇರೆ ಬೇರೆ ಇಲಾಖೆಯಲ್ಲಿದ್ದರೆ ಸಮಾನ ಸವಲತ್ತು ಸಿಗುತ್ತಿತ್ತು. ಇಲ್ಲಿ ಅಪಾರವಾದ ತಾರತಮ್ಯವಾಗಿದೆ. ಕೊಡಗು ಜಿಲ್ಲೆಯಲ್ಲಿ ಬಾರ್ಡರ್ ಸೆಕ್ಯೂರಿಟಿ ರಿಸರ್ವ್ ಪೋಲೀಸರನ್ನು ತಿಂಗಳಿಗೊಮ್ಮೆ ಬದಲಾಯಿಸಿ ಟಿ.ಎ., ಡಿ.ಎ.ಗಳನ್ನು ಮುಂಗಡ ನೀಡಲಾಗುತ್ತಿದೆ. ಆದೇ ಅರಣ್ಯ ಇಲಾಖೆಯ ಗಾರ್ಡ್‌ಗಳಿಗೆ 3–4 ವರ್ಷಗಳಿಂದ ವರ್ಗಾವಣೆ ಇರುವುದಿಲ್ಲ. ಟಿ.ಎ., ಡಿ.ಎ., ಸಹ ಇರುವುದಿಲ್ಲ. ಯಾಗ ಪ್ರಭಾವಕ್ಕೂ ಒಳಗಾಗದ, ಎಲ್ಲಾ ಕಷ್ಟಗಳನ್ನು ಅನುಭವಿಸುವ ಗಾರ್ಡ್‌ಗಳಿಗೆ ಆರು ತಿಂಗಳಿಗೊಮ್ಮೆಯಾದರೂ ವರ್ಗಾವಣೆ ಮತ್ತು ಟಿ.ಎ., ಡಿ.ಎ., ನೀಡುವ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೆ, ಅರಣ್ಯ ರಕ್ಷಕರನ್ನು, ವಿಭಾಗ ಮಟ್ಟದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಅರಣ್ಯ ಸಂರಕ್ಷಣಾಧಿಕಾರಿಗಳು ವೃತ್ತಮಟ್ಟದಲ್ಲಿ ಅವರ ವೃತ್ತದ ಒಂದು ವಿಭಾಗದಿಂದ ಇನ್ನೊಂದು ವಿಭಾಗಕ್ಕೂ ಹಾಗೂ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಒಂದು ವೃತ್ತದಿಂದ ಮತ್ತೊಂದು ವೃತ್ತಕ್ಕೆ ವರ್ಗಾವಣೆ ಮಾಡಲು ಅಧಿಕಾರ ಹೊಂದಿರುತ್ತಾರೆ. ಸರ್ಕಾರದ ಹಿತ ದೃಷ್ಟಿಯಿಂದ ವರ್ಗಾವಣೆಯಾದ ಅರಣ್ಯ ರಕ್ಷಕರಿಗೆ ಕರ್ನಾಟಕ ಸೇವಾ ನಿಯಮದ ಪ್ರಕಾರ ಅವರು ರೂ. 400–00 ವರ್ಗಾವಣೆ ಅಸುಧಾನ. ಅವರು ಮತ್ತು ಅವರ ಕುಟುಂಬದವರಿಗೆ ಪ್ರಯಾಣದ ಖರ್ಚು ಮತ್ತು ಅವರ ಸ್ವಂತ ಸಾಮಾಗ್ರಿಗಳನ್ನು ವರ್ಗಾವಣೆಯಾದ ಸ್ಥಳಕ್ಕೆ ಸಾಗಿಸಲು 1500 ಕಿ.ಜಿ.ಮಿತಿವರೆಗೆ ತಗಲುವ ವೆಚ್ಚವನ್ನು ನೀಡಲಾಗುತ್ತಿದೆ. ಸ್ವಂತ ಸಾಮಾಗ್ರಿಗಳನ್ನು ಸಾಗಿಸಲು ಪ್ರತೀ ಕಿ.ಮೀ.ಗೆ 1500 ಕಿ.ಜಿ.ಗೆ ರೂ. 1.50 ರೋಡ್ ಮೈಲೇಜನ್ನು ಅಥವಾ ರೈಲಿನಲ್ಲಿ ಸಾಗಿಸಿದರೆ ರೈಲ್ವೆ ವೆಚ್ಚವನ್ನು ನೀಡಲಾಗುತ್ತದೆ. ಈ ವರ್ಗಾವಣೆ ವೆಚ್ಚವನ್ನು ಭರಿಸಲು ಎಲ್ಲಾ ವಿಭಾಗಗಳಿಗೆ, ಅನುದಾನವನ್ನು ನೀಡಲಾಗಿದೆ. ಈ ವಿಷಯದ ಬಗ್ಗೆ ಸದ್ಯದಲ್ಲಿ ಯಾವುದೇ ಸಮಸ್ಯೆ ಇರುವುದಿಲ್ಲ, ಯಾವುದೆ ಸಮಸ್ಯೆ ಉದ್ಭವಿಸಿದಲ್ಲಿ ಅದನ್ನು ನಿವಾರಿಸಲು ಕೂಡಲೇ ಕ್ರಮ ಕೈಗೊಳ್ಳಲಾಗುವುದು.

ಅರಣ್ಯ ರಕ್ಷಕರುಗಳಿಗೆ ನಿಗದಿತ ಪ್ರಯಾಣ ವೆಚ್ಚವನ್ನು (ಫಿಕ್ಸ್‌ಡ್ ಟ್ರಾವಲಿಂಗ್ ಅಲೊಯನ್ಸ್) ನೀಡಲಾಗುತ್ತಿಲ್ಲ. ಅವರು ಕೇಂದ್ರ ಸ್ಥಾನದಿಂದ ಕರ್ತವ್ಯದ ಮೇಲೆ 8 ಕಿ.ಮೀ. ಮೇಲೆ ಹೊರಗೆ ಹೋದಾಗ ಮೇಲೆ ಹೇಳಿದ ನಿಯಮದಂತೆ ಪ್ರಯಾಣ ವೆಚ್ಚವನ್ನು ಹಾಗೂ ಅವರಿಗೆ ಭತ್ಯೆ ಪ್ರತಿ 24 ಗಂಟೆಗಳ ತಂಗುವಿಕೆ ರೂ. 25.00ಗಳನ್ನು ನೀಡಲಾಗುತ್ತಿದೆ. ಅವರು ಕಾಲು ನಡುಗೆಯಲ್ಲಿ ಪ್ರಯಾಣ ಮಾಡಿದರೂ ಕೂಡ ನಿಗದಿತ ದರದಲ್ಲಿ ಭತ್ಯೆ ನೀಡಲಾಗುವುದು. ವರ್ಗಾವಣೆಯಾದಾಗ ಅರಣ್ಯ ರಕ್ಷಕರು ತಮ್ಮ ಕ್ಷೇಮವನ್ನು ಉಪಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಸಲ್ಲಿಸಿದ ನಂತರವೇ ಪಾವತಿ ಮಾಡಲಾಗುವುದು.